# ನಿಮ್ಮ ಬ್ಯಾಂಕ್ ಖಾತೆಗೆ ನಾಮಿನಿ ಇದ್ದಾರೆ ತಾನೆ?



ಬ್ಯಾಂಕ್ ಖಾತೆಗಳಿಗೆ ನಾಮ ನಿರ್ದೇಶನ ಮಾಡಿಸುವುದು ಸಣ್ಣದೊಂದು ಪ್ರಕ್ರಿಯೆ. ಆದರೆ, ಬಹುತೇಕ ಗ್ರಾಹಕರು ನಾಮ ನಿರ್ದೇಶನ ಮಾಡಿಸುವ ಗೋಜಿಗೆ ಹೋಗುವುದಿಲ್ಲ. ಇದರಿಂದ ಖಾತೆದಾರರ ಸಾವಿನ ನಂತರ ಅವರ ವಾರಸುದಾರರು ತೊಂದರೆ ಎದುರಿಸಬೇಕಾಗುತ್ತದೆ.

■ ಎಚ್.ಎಸ್. ಶ್ರೀಮತಿ

ಹಿಂದೆ ಶ್ರೀಮಂತರು ಮತ್ತು ವಿದ್ಯಾವಂತರು ಮಾತ್ರ ಬ್ಯಾಂಕ್ ಖಾತೆಯನ್ನು ಹೊಂದಿರುತ್ತಿದ್ದರು. ಆದರೆ ಬದಲಾದ ಸಂದರ್ಭದಲ್ಲಿ ಪ್ರಸ್ತುತ ಬಡವ ಬಲ್ಲಿದನೆಂಬ ವ್ಯತ್ಯಾಸವಿಲ್ಲದೆ ಬಹುತೇಕ ನಾಗರಿಕರು ಬ್ಯಾಂಕ್ ಖಾತೆಯನ್ನು ಹೊಂದಿದ್ದಾರೆ. ಆಧಾರ್ ಗುರುತಿನ ಚೀಟಿ ಎಷ್ಟು ಅನಿವಾರ್ಯವೋ ಬ್ಯಾಂಕ್ ಖಾತೆಯನ್ನು ಹೊಂದಿರುವುದು ಕೂಡ ಅಷ್ಟೇ ಅವಶ್ಯಕವಾಗಿದೆ. ಸುಸೂತ್ರವಾದ ಬ್ಯಾಂಕ್ ವ್ಯವಹಾರಕ್ಕಾಗಿ ನಾಮನಿರ್ದೇಶನ ಮಾಡುವುದು ಬಹಳ ಮುಖ್ಯ. ಬ್ಯಾಂಕ್ ಖಾತೆಯನ್ನು ಹೊಂದಿರುವ ವ್ಯಕ್ತಿ ಮರಣವನ್ನಪ್ಪಿದಾಗ ನಾಮನಿರ್ದೇಶನವಿಲ್ಲದಿದ್ದರೆ ಕುಟುಂಬದ ಸದಸ್ಯರು ಬಹಳ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ನಾನು ಅಂತಹ ಸಂದರ್ಭದಲ್ಲಿ ಅನುಭವಿಸಿದ ಪರಿಪಾಟಲನ್ನು ಇಲ್ಲಿ ಹಂಚಿಕೊಳ್ಳುತ್ತಿದ್ದೇನೆ.

ಈಗ ಎರಡು ವರ್ಷಗಳ ಹಿಂದೆ ನನ್ನ ತಂದೆ ತಮ್ಮ ತೊಂಬತ್ತಮೂರನೇ ವರ್ಷದಲ್ಲಿ ನಿಧನರಾದರು. ಆಗ ನನ್ನ ತಾಯಿಯ ವಯಸ್ಸು ಎಂಬತ್ತಾರು ವರ್ಷ. ಕೇಂದ್ರ ಸರ್ಕಾರದ ನೌಕರಿಯಿಂದ ನಿವೃತ್ತರಾಗಿದ್ದ ನನ್ನ ತಂದೆ ಪಿಂಚಣಿಯನ್ನು ಪಡೆಯುತ್ತಿದ್ದ ಭಾರತೀಯ ಸ್ಟೇಟ್ ಬ್ಯಾಂಕ್ ಹಾಗೂ ಇನ್ನೆರಡು ಸಹಕಾರಿ ಬ್ಯಾಂಕ್‌ಗಳಲ್ಲಿ ಖಾತೆಗಳನ್ನು ಹೊಂದಿದ್ದರು. ಮೊದಲಿಗೆ ಸಹಕಾರಿ ಬ್ಯಾಂಕ್‌ನಲ್ಲಿದ್ದ ಖಾತೆಯನ್ನು ಮುಕ್ತಾಯಗೊಳಿಸುವುದಕ್ಕಾಗಿ ಬ್ಯಾಂಕನ್ನು ಸಂಪರ್ಕಿಸಿದೆ. ಆ ಖಾತೆಗೆ ನನ್ನ ತಂದೆ ನನ್ನ ತಾಯಿಯ ಹೆಸರನ್ನು ನಾಮಿನಿಯಾಗಿ ಸೂಚಿಸಿದ್ದರು. ಆದರೆ ಆ ಬ್ಯಾಂಕಿನಲ್ಲಿ ನನ್ನ ತಾಯಿ ಯಾವುದೇ ಖಾತೆಯನ್ನು ಹೊಂದಿರಲಿಲ್ಲ. ಹೀಗಾಗಿ ಬ್ಯಾಂಕಿನ ಸಿಬ್ಬಂದಿ, ನನ್ನ ತಾಯಿ ಯಾವ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದರೋ ಅಲ್ಲಿನ ಅಧಿಕಾರಿಗಳಿಂದ ಸಹಿಯನ್ನು ದೃಢೀಕರಿಸಿಕೊಂಡು ಬರಲು ಹೇಳಿದರು. ಸಹಿ ದೃಢೀಕರಣವಾದ ಮೇಲೆ ಖಾತೆಯಲ್ಲಿದ್ದ ಹಣವನ್ನು ಚೆಕ್ ಮೂಲಕ ಸಂದಾಯ ಮಾಡಿದರು. ಎರಡನೇ ಬ್ಯಾಂಕಿನಲ್ಲಿದ್ದ ಖಾತೆಗಳಿಗೆ ನಾಮನಿರ್ದೇಶನವೇನೋ ಇತ್ತು, ಆದರೆ ಹೆಸರಿನಲ್ಲಿ ವ್ಯತ್ಯಾಸವಿತ್ತು. ಒಂದು ಖಾತೆಗೆ ಎಸ್. ಅಂಬುಜ ಎಂದಿದ್ದರೆ, ಇನ್ನೊಂದು ಖಾತೆಗೆ ಅಂಬುಜಾ ಬಾಯಿ ಎಂದಿತ್ತು. ಹೀಗಾಗಿ, ಬ್ಯಾಂಕಿನ ಅಧಿಕಾರಿಗಳು ನೋಟರಿಯಿಂದ ಅಫಿಡವಿಟ್ ತರಲು ಹೇಳಿದರು. ಎಂಬತ್ತಾರು ವರ್ಷದ ನನ್ನ ತಾಯಿಯನ್ನು ನಮ್ಮ ಮನೆಯಿಂದ ಸುಮಾರು ಎರಡು ಕಿಲೋಮೀಟರ್ ದೂರದ ನೋಟರಿಯವರ ಕಚೇರಿಗೆ ಕರೆದುಕೊಂಡುಹೋಗಬೇಕಾಯಿತು.

ಮುಂದೆ ನಮ್ಮ ಮನೆಯಿಂದ ಒಂದು ಕಿಲೋಮಿಟರ್ ದೂರದ ಭಾರತೀಯ ಸ್ಟೇಟ್ ಬ್ಯಾಂಕಿಗೆ ಹೋಗಿ ನನ್ನ